(6) ಗಮನ ಸೆಳೆಯುವ ಸೂಚನೆ
ನಾಗಮಂಗಲ ತಾಲ್ಲೂಕಿನ ಕೃಷಿ ಉತ್ಪನ್ನ ಮಾರಾಟ ಸಮಿತಿಯನ್ನು
ವಿಭಜನೆ ಮಾಡುವ ಬಗ್ಗೆ

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) :- ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರನ್ನು ನಾನು ನಾಗಮಂಗಲ ತಾಲ್ಲೂಕಿನಲ್ಲಿ ಕೃಷಿ ಮಾರುಕಟ್ಟೆ ಸಮಿತಿಯನ್ನು ನಾನು ನಿರ್ದೇಶನ ಮಾಡಿ ರಚನೆ ಮಾಡಿದ್ದಾರೆ ; ಇದರ ಬಗ್ಗೆ ಚುನಾವಣೆಗೆ ನೋಟಿಫಿಕೇಷನ್ ಇಶ್ಯೂ ಮಾಡಿ, ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆಮಾಡಿ, ಚುನಾವಣೆ ನಡೆಸಬೇಕೆಂದು ಸರ್ಕಾರ ಸೂಚನೆ ಕೊಟ್ಟ ನಂತರ ಈ ನಾಮನಿರ್ದೇಶನಕ್ಕೋಸ್ಕರವೇ ರೈತರ ಒಂದು ಸಂಸ್ಥೆಯನ್ನು ಹಾಳು ಮಾಡತಕ್ಕಂಥ ಒಂದು ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ ಎಂಬ ವಿಷಯದ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :- ಕೃಷ್ಣರಾಜಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ ನಾಗಮಂಗಲ ಮತ್ತು ಪಾಂಡವಪುರ ತಾಲ್ಲೂಕಿಗೆ ಸ್ವತಂತ್ರ ಮಾರುಕಟ್ಟೆ ಸಮಿತಿಯನ್ನು ದಿನಾಂಕ : 07-05-1997ರಲ್ಲಿ ಸ್ಥಾಪಿಸಲಾಗಿದೆ. ಮಾರುಕಟ್ಟೆ ಕಾಯ್ದೆಯ ಪ್ರಕರಣ 10ರ ಮೇರೆಗೆ ಹೊಸದಾಗಿ ಸ್ಥಾಪಿಸಲಾದ ಮಾರುಕಟ್ಟೆ ಸಮಿತಿಯ ನಾಮನಿರ್ದೇಶಿತ ಸದಸ್ಯರ ಅಧಿಕಾರಾವಧಿಯು 2 ವರ್ಷಗಳಾಗಿದ್ದು, ಮತ್ತೊಂದು ವರ್ಷ ಮುಂದುವರೆಸಲು ಅವಕಾಶವಿದ್ದು, ಅದರ ಮೇರೆಗೆ ನಾಮನಿರ್ದೇಶಿತ ಸಮಿತಿಯ ಅವಧಿಯು ದಿನಾಂಕ : 12-11-2000ಕ್ಕೆ ಮುಕ್ತಾಯವಾಗಿರುತ್ತದೆ. ನಂತರ ಸಮಿತಿಗೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ.

ನಾಗಮಂಗಲ ಮಾರುಕಟ್ಟೆ ಸಮಿತಿಗೆ ಚುನಾವಣೆ ನಡೆಸಲು ಸರ್ಕಾರವು ದಿನಾಂಕ : 14-02-2001ರಲ್ಲಿ ಅನುಮತಿ ನೀಡಿದೆ. ಮಾರುಕಟ್ಟೆ ಕಾಯ್ದೆಯಲ್ಲಿನ ಅವಕಾಶದ ಮೇರೆಗೆ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಮತದಾರರ ಪಟ್ಟಿಯನ್ನು ತೀವ್ರವಾಗಿ ಪರಿಷ್ಕರಿಸುವಂತೆ ಮತ್ತು ಕೃಷಿಕರ ಕ್ಷೇತ್ರಗಳ ವಿಂಗಡಣೆ ಮಾಡುವಂತೆ ಹಾಗೂ ಚುನಾವಣೆ ನಡೆಸಲು ದಿನಾಂಕ : 26-02-2001ರಲ್ಲಿ ಕೃಷಿ ಮಾರಾಟ ನಿರ್ದೇಶಕರು ನಿರ್ದೇಶನ ನೀಡಿರುತ್ತಾರೆ.

ನಾಗಮಂಗಲ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ ಪಾಂಡವಪುರದಲ್ಲಿ ಸ್ವತಂತ್ರ ಮಾರುಕಟ್ಟೆ ಸ್ಥಾಪಿಸಬೇಕೆಂದು ಶಾಸಕರು ಹಾಗೂ ಸ್ಥಳೀಯರಿಂದ ಬಂದ ಮನವಿಗಳನ್ನು ಸರ್ಕಾರವು ಪರಿಶೀಲಿಸಿ ನಾಗಮಂಗಲ ಮಾರುಕಟ್ಟೆ ಸಮಿತಿ ವಿಭಜಿಸಿ ಪಾಂಡವಪುರ ತಾಲ್ಲೂಕಿಗೆ ಪಾಂಡವಪುರದಲ್ಲಿ ಪ್ರತ್ಯೇಕ ಮಾರುಕಟ್ಟೆ ಸಮಿತಿ ಸ್ಥಾಪಿಸುವ ಉದ್ದೇಶವನ್ನು ಅಧಿಸೂಚನೆ ಸಂಖ್ಯೆ : ಸಮಾತೂ 375 ಎಂಆರ್‌ಇ 2000, ದಿನಾಂಕ : 18-12-2001ರಲ್ಲಿ ಪ್ರಕಟಿಸಿ ಅಧಿಸೂಚನೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿರುತ್ತದೆ. ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ : 31-01-2002ರಲ್ಲಿ ಹಾಗೂ ಕನ್ನಡಪ್ರಭ ದಿನಪತ್ರಿಕೆಯಲ್ಲಿ ದಿನಾಂಕ : 29-01-2002ರಲ್ಲಿ ಅಧಿಸೂಚನೆಯನ್ನು ಪ್ರಕಟಗೊಳಿಸಲಾಗಿದೆ. ಸದರಿ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಂದಿರುವುದಿಲ್ಲ.

ದಿನಾಂಕ : 27-05-2002ರಲ್ಲಿ ನಾಗಮಂಗಲ ಮಾರುಕಟ್ಟೆ ಸಮಿತಿಯನ್ನು ವಿಭಜಿಸಿ, ಪಾಂಡವಪುರ ಸ್ವತಂತ್ರ ಸಮಿತಿಯನ್ನು ಸ್ಥಾಪಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಎರಡು ಸಮಿತಿಗಳಿಗೆ ದಿನಾಂಕ : 19-06-2002ರಲ್ಲಿ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ.

ಮಾರುಕಟ್ಟೆ ಕಾಯ್ದೆಯಲ್ಲಿ ವಿಭಜನೆ ಮೂಲಕ ಸ್ವತಂತ್ರ ಸಮಿತಿ ರಚಿಸಲು ಹಾಗೂ ಅಂತಹ ಸಮಿತಿಗಳಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಲು ಅವಕಾಶವಿರುತ್ತದೆ. ಪಾಂಡವಪುರದಲ್ಲಿ ಸ್ವತಂತ್ರ ಸಮಿತಿ ಸ್ಥಾಪಿಸಲು ಬಂದ ಬೇಡಿಕೆಗಳನ್ನು ಪರಿಗಣಿಸಿ, ನಾಗಮಂಗಲ ಸಮಿತಿಯನ್ನು ವಿಭಜಿಸಿ ಪಾಂಡವಪುರದಲ್ಲಿ ಸ್ವತಂತ್ರ ಸಮಿತಿಯನ್ನು ಸ್ಥಾಪಿಸಿ, ಸದಸ್ಯರನ್ನು ಕಾಯ್ದೆ ಪ್ರಕರಣ 10ರ ಮೇರೆ ನಾಮ ನಿರ್ದೇಶನ ಮಾಡಿರುವುದು ಕಾಯ್ದೆಬದ್ಧ ಕ್ರಮವಾಗಿರುತ್ತದೆ.

ಶ್ರೀ ಎನ್. ಚಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಯಾವುದೇ ಅಧಿಸೂಚನೆಗಳನ್ನು ಹೊರಡಿಸಿದಾಗ ಸಾರ್ವಜನಿಕರು ತಮ್ಮ ಅಬ್ಜೆಕ್ಷನ್‌ನನ್ನು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ದಯವಿಟ್ಟು ತಾವುಗಳು ಆ ಸಂದರ್ಭದಲ್ಲಿ ಸಚಿವರಾಗಿರಲಿಲ್ಲ. ಒಂದು ವರ್ಷದ ಹಿಂದೆ ಬೇರೆ ಸಚಿವರು ಇಲಾಖೆಯಲ್ಲಿದ್ದಾಗ ನಾನು ಒಂದು ಪತ್ರವನ್ನು ಬರೆದು, ಸಾರ್ವಜನಿಕರಿಂದ ದೂರನ್ನು ಕೂಡ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಕೊಡಲಾಗಿತ್ತು. ಕಳೆದ 1992ರಿಂದ ಇಲ್ಲಿಯವರೆವಿಗೂ ಅಲ್ಲಿ ನಾಮಿನೇಟೆಡ್ ಬಾಡಿಯೇ ಮುಂದುವರಿದುಕೊಂಡು ಬಂದಿದೆ. ಮೊದಲು ಮಂಡ್ಯದಿಂದ ಕೆ.ಆರ್. ಪೇಟೆ ಮತ್ತು ನಾಗಮಂಗಲ, ಪಾಂಡವಪುರ ಒಂದು ಸಮಿತಿಯಾಗಿ ಮುಂದುವರಿಯಿತು. ನಂತರ ಮತ್ತೆ ನಾಮಿನೇಷನ್ ಮಾಡುವ ಉದ್ದೇಶದಿಂದಲೇ, ಪಾಂಡವಪುರ ಮತ್ತು ನಾಗಮಂಗಲವನ್ನು ಬೈಫರ್‌ಕೇಟ್ ಮಾಡಿದರು. ಅದರನ್ವಯವೇ ಬೈಫರ್‌ಕೇಟ್ ಮಾಡಿದ್ದಾರೆ. ಆದರೆ ಹತ್ತು ವರ್ಷಗಳಿಂದ ಇಲ್ಲಿಯವರೆಗೆ ನಾಗಮಂಗಲ ಕೇಂದ್ರ ಸ್ಥಾನದಲ್ಲಿ ಸ್ವಂತ ಮಾರ್ಕೆಟ್ ಯಾರ್ಡ್‌ನ್ನು ಹೊಂದಿಲ್ಲ. ಕಳೆದ ಆರು ತಿಂಗಳ ಹಿಂದೆ ಸಂಬಂಧಪಟ್ಟ ಮಂತ್ರಿಗಳು, ಅಧಿಕಾರಿಗಳು, ನನ್ನ ಪತ್ರದ ಮೇಲೆ ವ್ಯವಹರಿಸಿ ಇದು ಫಿಸಿಬಿಲಿಟಿ ಬರುವುದಿಲ್ಲ, ಪಾಂಡವಪುರ, ನಾಗಮಂಗಲವನ್ನು ಬೈಫರ್‌ಕೇಟ್ ಮಾಡತಕ್ಕಂಥಾದ್ದು ಇವೊತ್ತಿನ ಆದಾಯದ ಪ್ರಮಾಣವನ್ನು ಅನುಸರಿಸಿ ಮಾಡಲು ಆಗುವುದಿಲ್ಲ ಎಂಬುದು ಮನವರಿಕೆಯಾದ ನಂತರ ಜಿಲ್ಲಾಧಿಕಾರಿಗಳಿಗೆ ನೋಟೀಸ್ ಕೊಟ್ಟು ಚುನಾವಣೆಯನ್ನು ಮಾಡಬೇಕೆಂದು ಹೇಳಿ, ಹಣವನ್ನೂ ಕೂಡ ಬಿಡುಗಡೆ ಮಾಡಿ ಚುನಾವಣೆ ನೋಟಿಫಿಕೇಷನ್ ಆದನಂತರ ಮತ್ತೆ ರಾಜಕೀಯ ದುರುದ್ದೇಶದಿಂದ ತಮ್ಮ ಪಕ್ಷದವರಾದ ನಾಲ್ಕೈದು ಜನರನ್ನು ನಾಮಿನೇಷನ್ ಮಾಡುವ ದುರುದ್ದೇಶದಿಂದ ಈ ಕಮಿಟಿಯನ್ನು ಪ್ರಾರಂಭ ಮಾಡಿದ್ದಾರೆ ದಯಮಾಡಿ ಇದನ್ನು ರದ್ದುಗೊಳಿಸಿ ; ಆ ತಾಲ್ಲೂಕಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಸಮಿತಿಯು ಕೆಲಸ ಮಾಡಬೇಕಾಗಿದೆ. ಅಲ್ಲಿ ನಾಮಿನೇಟೆಡ್ ಬಾಡಿ ಇದ್ದುದರಿಂದ ಯಾವುದೇ ತರಹದ ಅಭಿವೃದ್ಧಿ ಕೆಲಸಗಳು ಅಲ್ಲಿ ಆಗಿಲ್ಲ. ಸ್ವಂತ ಮಾರುಕಟ್ಟೆಯಿಲ್ಲದೇನೇ ಮುನಿಸಿಪಾಲಿಟಿಯವರ ಜಾಗದಲ್ಲಿ ಸುಂಕವನ್ನು ವಸೂಲಿ ಮಾಡುತ್ತಾ ಇದ್ದಾರೆ. ಇವರ ಕಾಯಿದೆ ಪ್ರಕಾರ ಸ್ವಂತ ಮಾರುಕಟ್ಟೆ ಹೊಂದಿದ್ದರೆ ಮಾತ್ರ ಸುಂಕವನ್ನು ಕಲೆಕ್ಟ್ ಮಾಡಬೇಕೆಂದು ಇದೆ. ಆದರೂ ಕೂಡ ಇವರು ಮುನಿಸಿಪಾಲಿಟಿ ಜಾಗದಲ್ಲಿ ರಿಶೀದಿಯನ್ನು ಹಾಕಿ ಸುಂಕ ಕಲೆಕ್ಟ್ ಮಾಡುತ್ತಿದ್ದಾರೆ. ಈಗಾಗಲೇ ಹತ್ತು ವರ್ಷಗಳಿಂದ ನಾಮಿನೇಟೆಡ್ ಬಾಡಿ

ಇರುವುದರಿಂದ ಸಾರ್ವಜನಿಕರಿಗೆ ಮಾರುಕಟ್ಟೆಯ ಯಾವುದೇ ಸೌಲಭ್ಯ ಸಿಗದೇ ಇರತಕ್ಕಂಥ ಪರಿಸ್ಥಿತಿಯುಂಟಾಗಿದೆ. ಆದ್ದರಿಂದ ಸರಕಾರದವರು ತಮ್ಮ ನಿಲುವನ್ನು ಬದಲಾಯಿಸಿಕೊಂಡು ಚುನಾವಣೆಯನ್ನು ಏನು ಡಿಕ್ಲೇರ್ ಮಾಡಿದ್ದಾರೆ ಅದನ್ನು ನಡೆಸತಕ್ಕಂಥ ಕ್ರಮಕ್ಕೆ ಮುಂದಾಗಬೇಕು ಮತ್ತು ಮಾನ್ಯ ಸಚಿವರು ಈ ಸಂದರ್ಭದಲ್ಲಿ ನನಗೆ ಸದನದ ಮೂಲಕ ಈ ಬಗ್ಗೆ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೇ, ನಮ್ಮ ಕೃಷಿ ಮಾರುಕಟ್ಟೆ ಇಲಾಖೆಯ ಉದ್ದೇಶ ಮಾರುಕಟ್ಟೆಗಳಿಗೆ ಉತ್ಪನ್ನ ಹೆಚ್ಚಾಗಬೇಕು, ನಮ್ಮ ರೈತರಿಗೆ ಅತಿ ಸಮೀಪದಲ್ಲಿ ತಮ್ಮ ಮಾಲನ್ನು ಮಾರಾಟ ಮಾಡಲು ಅನುಕೂಲ ಮಾಡಿಕೊಡಬೇಕೆನ್ನುವಂಥಾದ್ದು ನಮ್ಮ ಉದ್ದೇಶವಾಗಿದೆ. ಮೊದಲು ನಾವು ಕೆ.ಆರ್. ಪೇಟೆಯನ್ನು ನಾಗಮಂಗಲ ಹಾಗೂ ಪಾಂಡವಪುರಗಳಲ್ಲಿ ವಿಭಜನೆ ಮಾಡಿದ್ದೇವೆ. ಅನಂತರ ಮತ್ತೆ ಬೇಡಿಕೆ ಬಂದಮೇಲೆ ನಾಗಮಂಗಲ ಮತ್ತು ಪಾಂಡವಪುರವನ್ನು ಕೂಡ ವಿಭಜನೆ ಮಾಡುವಂಥ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರ ಗ್ರಹಿಕೆ ತಪ್ಪಾಗಿದೆ ಎಂದು ಕಾಣುತ್ತದೆ. ನಮ್ಮ ಉದ್ದೇಶ ನಾಮನಿರ್ದೇಶನ ಮಾಡಬೇಕೆಂಬುದು ಅಲ್ಲ. ಉತ್ಪನ್ನ ಹೆಚ್ಚು ಮಾಡಬೇಕೆನ್ನುವುದು. ಕೆ.ಆರ್. ಪೇಟೆಯು 1996-97ರಲ್ಲಿ ವಿಭಜನೆಗಿಂತಲೂ ಪೂರ್ವದಲ್ಲಿ 19,87,100 ರೂಪಾಯಿಗಳ ಉತ್ಪನ್ನ ಮಾಡಿಕೊಂಡಿತ್ತು. ಆ ವಿಭಜನೆಯ ನಂತರ ಪಾಂಡವಪುರ ಹಾಗೂ ನಾಗಮಂಗಲ ಎರಡೂ ಸೇರಿ 29 ಲಕ್ಷ ರೂಪಾಯಿಗಳ ಉತ್ಪಾದನೆ ಮಾಡಿಕೊಂಡಿತು. ಅದೂ ಅಲ್ಲದೆ ಕೆ.ಆರ್. ಪೇಟೆ ಒಂದಕ್ಕೆ 19 ಲಕ್ಷ ಲಕ್ಷ ರೂಪಾಯಿಗಳ ಉತ್ಪಾದನೆಯಾಯಿತು. ಹೀಗಾಗಿ ವಿಭಜನೆ ಮಾಡಿದ್ದರಿಂದ 29 ಲಕ್ಷ ರೂಪಾಯಿಗಳಷ್ಟು ಹೆಚ್ಚು ಉತ್ಪನ್ನವಾಯಿತು. ಅದರ ಪ್ರಕಾರ ನಾವು ನಾಗಮಂಗಲ ಮತ್ತು ಪಾಂಡವಪುರಗಳನ್ನು ಪ್ರತ್ಯೇಕ ಮಾಡುವುದರಿಂದ ನಾಗಮಂಗಲದಿಂದ 18 ಲಕ್ಷ, ಪಾಂಡವಪುರದಿಂದ 8 ರಿಂದ 10 ಲಕ್ಷ ರೂಪಾಯಿಗಳವರೆಗೆ ಉತ್ಪನ್ನವನ್ನು ನಿರೀಕ್ಷೆ ಮಾಡಿದ್ದೇವೆ. ನಮ್ಮ ಉದ್ದೇಶವೇ ಮಾರುಕಟ್ಟೆಗಳ ಉತ್ಪನ್ನವನ್ನು ಹೆಚ್ಚು ಮಾಡಬೇಕೆಂಬುದಾಗಿದೆ. ಅದರ ಜೊತೆಗೆ ನಮ್ಮ ರೈತರು ತಮ್ಮ ಮಾಲನ್ನು ಸಮೀಪದಲ್ಲಿಯೇ ಒಯ್ದು ವ್ಯವಹಾರ ಮಾಡಲು ಅನುಕೂಲ ಮಾಡಿಕೊಡುವುದೂ ಆಗಿದೆ. ಅದನ್ನು ಬಿಟ್ಟು ಯಾವ ದುರುದ್ದೇಶದಿಂದಲೂ ಮಾಡಿಲ್ಲ. ಅದರ ಜೊತೆಗೆ ಅಲ್ಲಿ ಚುನಾವಣೆ ನಡೆಸಲು ನಾವು ಆಗಲೇ ಆದೇಶವನ್ನು ಮಾಡಿದ್ದೇವೆ ಅದರ ನಂತರ ಬೈಫರ್ಕೇಟ್ ಮಾಡಬೇಕೆಂದು ಅರ್ಜಿಗಳು ಬಂದಕಾರಣ ಪುನಃ ಪರಿಶೀಲಿಸಿ ನಾಮನಿರ್ದೇಶನ ಮಾಡಿದ್ದೇವೆ.

ಶ್ರೀ ಎನ್. ಚಿಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಾರುಕಟ್ಟೆಯ ಸವಲತ್ತನ್ನು ಒದಗಿಸುವುದಕ್ಕೋಸ್ಕರ ಬೈಫರ್‌ಕೇಷನ್ ಮಾಡಿ ನಾಮಿನೇಟೆಡ್ ಬಾಡಿಯನ್ನು ತರಬೇಕಾದ ಅವಶ್ಯಕತೆಯಿಲ್ಲ. ನಾಗಮಂಗಲ ಕೇಂದ್ರ ಸ್ಥಾನ ಇದ್ದಾಗಲೇ ಪಾಂಡವಪುರದಲ್ಲಿ ಸವಲತ್ತನ್ನು ಒದಗಿಸತಕ್ಕಂಥ ಅವಕಾಶವಿದೆ. ಇವೊತ್ತು ಸ್ವಂತ ಮಾರುಕಟ್ಟೆಯಾರ್ಡ್‌ನ್ನು ಹೊಂದುವುದಕ್ಕೆ ಆಗುತ್ತದೆಯೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಹತ್ತು ವರ್ಷಗಳಿಂದ ಇರತಕ್ಕಂಥ ನಾಮಿನೇಟೆಡ್ ಬಾಡಿ ಯಾವುದೇ ತರಹದ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ಇವೊತ್ತಿಗೂ ಮುಂದುವರಿದಿರತಕ್ಕಂಥ ನಾಮಿನೇಟೆಡ್

ಬಾಡಿ ಯಾವ ಕೆಲಸವನ್ನು ಮಾಡಲು ಆಗುವುದಿಲ್ಲವೆನ್ನುವುದು ಮನವರಿಕೆಯಾಗಿರುವುದರಿಂದ ಚುನಾವಣೆ ಮಾಡಬೇಕು. ಹಿಂದೆ ಮಂತ್ರಿಗಳು, ಸಂಬಂಧಪಟ್ಟ ಅಧಿಕಾರಿಳು ನನ್ನ ಜೊತೆಗೆ ಚರ್ಚೆ ಮಾಡಿ ಇದಕ್ಕೆ ಅನಿವಾರ್ಯವಾಗಿ ಚುನಾವಣೆ ಮಾಡಬೇಕು, ಇಲ್ಲಿಯವರೆಗೆ ನಾಮಿನೇಟೆಡ್ ಬಾಡಿ ಮುಂದುವರಿದುಕೊಂಡು ಬಂದುದರಿಂದ ಯಾವುದೇ ಅಭಿವೃದ್ಧಿ ಕೆಲಸಗಳು ಆಗಿಲ್ಲ, ಹೀಗಾಗಿ ನಾವು ಅಲ್ಲಿ ನಾಮಿನೇಷನ್ ಮಾಡುವುದಿಲ್ಲವೆಂದು ಹೇಳಿ ಪಾಂಡವಪುರ ಮತ್ತು ನಾಗಮಂಗಲವನ್ನು ಬೈಪಾಸ್ ಮಾಡುವುದರಿಂದ ಆದಾಯ ಹೆಚ್ಚು ಬರುವುದಿಲ್ಲವೆಂಬುದನ್ನು ಮನಗಂಡು ಚುನಾವಣೆಯನ್ನು ಡಿಕ್ಲೇರ್ ಮಾಡಿದ್ದಾರೆ. ಹಾಗೆಂದಮೇಲೆ ಹಿಂದೆ ಮಾನ್ಯ ಸಚಿವರು ಮತ್ತು ಅಧಿಕಾರಿಗಳು ಮಾಡಿದ ನಿರ್ಧಾರಗಳು ತಪ್ಪು ಎಂಬುದನ್ನು ಸರಕಾರದವರು ಒಪ್ಪಬೇಕಾಗುತ್ತದೆ. ತದನಂತರ ಒತ್ತಾಯಪೂರ್ವಕವಾಗಿ ಮತ್ತು ರಾಜಕೀಯವಾಗಿ ಇದನ್ನು ಬಳಸಿದ್ದಾರೆ ಎನ್ನುವ ವಿಚಾರವನ್ನು ಸರಕಾರದವರು ನಡೆದುಕೊಂಡಂಥ ರೀತಿಯಲ್ಲಿ ನಾವು ಕಂಡುಕೊಳ್ಳಬಹುದಾಗಿದೆ ನಾನು ಹಿಂದೆ ಸರಕಾರದವರು ಮಾಡಿದ ನಿರ್ಧಾರವನ್ನು ಮುಂದುವರಿಸುತ್ತೇನೆ ಎಂಬ ನಿರ್ಧಾರವನ್ನು ಸರಕಾರದವರು ದಯಮಾಡಿ ಬಿಡಬೇಕು. ಸಾರ್ವಜನಿಕ ಹಿತದೃಷ್ಟಿಯಿಂದ ಇಂಥ ಮಾರುಕಟ್ಟೆಯನ್ನು ಮಾಡಬೇಕಾದಂಥ ಅವಶ್ಯಕತೆಯೂ ಇದೆ. ಅಲ್ಲಿ ಸ್ವಂತ ಮಾರುಕಟ್ಟೆಯಾರ್ಡ್‌ನ್ನು ಕೂಡ ಇನ್ನೂ ಹೊಂದಿಲ್ಲ. ದಯಮಾಡಿ ಮಾನ್ಯ ಸಚಿವರು ಈ ಕುರಿತಾದ ತಮ್ಮ ನಿಲುವನ್ನು ಬದಲಾವಣೆ ಮಾಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಪಾಟೀಲ (ಸಾಸನೂರು) :- ಮಾನ್ಯ ಅಧ್ಯಕ್ಷರೇ, ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಸಂದರ್ಭ ಬಂದಾಗ ಹೇಳಿದ್ದರು. ನಾಮನಿರ್ದೇಶನ ಮಾಡುವ ಅಧಿಕಾರವನ್ನು ಈ ಸದನವು ಸರಕಾರಕ್ಕೆ ಕೊಟ್ಟಿದೆ.

ಶ್ರೀ ಎನ್. ಚಲುವರಾಯಸ್ವಾಮಿ :- ನಿಮಗೆ ಅಧಿಕಾರ ಇಲ್ಲವೆಂದು ಹೇಳಿಲ್ಲ. ಆದರೆ ಇಲ್ಲಿ ಅದರ ಅವಶ್ಯಕತೆಯಿದೆಯೇ ಎಂದು ನಾನು ಕೇಳುತ್ತಿದ್ದೇನೆ. ಹತ್ತು ವರ್ಷಗಳಿಂದಲೂ ನಾಮಿನೇಟೆಡ್ ಬಾಡಿ ಮಾಡಿಕೊಂಡು ಸಂಸ್ಥೆಯು ಹಾಳಾಗಿ ಹೋಗುತ್ತಾ ಇದೆ. ಅದನ್ನು ಮತ್ತೂ ಮುಂದುವರಿಸತಕ್ಕಂಥ ಅವಶ್ಯಕತೆ ಏನಿದೆ ?

ಶ್ರೀ ಬಿ.ಎಸ್. ಪಾಟೀಲ (ಸಾಸನೂರು) :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿ ಯಾವುದೇ ಅಭಿವೃದ್ಧಿಯ ಕೆಲಸಗಳು ಆಗಿಲ್ಲವೆನ್ನುವುದು ಸುಳ್ಳು. ನಾವು ಅಲ್ಲಿ ಉತ್ಪನ್ನ ಜಾಸ್ತಿ ಮಾಡಿದ್ದೇವೆ. ಮಾನ್ಯ ಸದಸ್ಯರು ಯಾವ ಅಭಿವೃದ್ಧಿಯನ್ನು ಅಲ್ಲಿ ಮಾಡಬೇಕೆಂದು ಹೇಳಿದರೆ ಸಮಿತಿಯವರು ಅದನ್ನು ಮಾಡಲು ಮುಂದಾಗುತ್ತಾರೆ. ನಾವು ಅಲ್ಲಿ ವಿಭಜನೆ ಮಾಡುವುದರಿಂದ ಯಾವುದೇ ಮಾರುಕಟ್ಟೆ ಕ್ಷಮತೆಗೆ ಹಾನಿಯಾಗಿಲ್ಲ. ಅದರ ಬದಲು ಉತ್ಪನ್ನವು ಜಾಸ್ತಿಯಾಗಿದೆ. ಎರಡು ಮೂರು ಪಟ್ಟು ಉತ್ಪನ್ನ ಜಾಸ್ತಿಯಾಗಿದೆ. ಉತ್ಪನ್ನದ ಹಿನ್ನಲೆಯಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆಂದು ವಿಚಾರ ಮಾಡಿಕೊಂಡು ನಾವು ಅಭಿವೃದ್ಧಿ ಪಡಿಸುತ್ತೇವೆಯೇ ಹೊರತು ಯಾವ ದುರುದ್ದೇಶದಿಂದ ಸಮಿತಿಯನ್ನು ಮಾಡಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ನಿಯಮಾವಳಿಗಳ ಪ್ರಕಾರವೇ ಮಾಡಿದ್ದೇವೆ.

ಶ್ರೀ ಎನ್. ಚಲುವರಾಯಸ್ವಾಮಿ :- ಹಾಗಾದರೆ ಚುನಾವಣೆ ಮಾಡಲು ನೀವು ಹಿಂದೆ ಏಕೆ ನಿರ್ಧಾರವನ್ನು ತೆಗೆದುಕೊಂಡಿದ್ದಿರಿ ? ಇದಕ್ಕೆ ಸ್ಪಷ್ಟವಾದ ಉತ್ತರ ಕೊಡಲು ಅವರು

ಇಷ್ಟ ಪಡುತ್ತಿಲ್ಲ. ಒಂದು ವರ್ಷದ ಹಿಂದೆ ಇದೇ ಸರ್ಕಾರ ಚುನಾವಣೆ ನಡೆಸುವುದಕ್ಕೆ ನೋಟಿಫಿಕೇಷನ್ ಮಾಡಿ ಹಣ ರಿಲೀಸ್ ಮಾಡಿದ್ದಾರೆ. ಮತ್ತೆ ಚುನಾವಣೆ ರದ್ದುಪಡಿಸಲು ಇದ್ದ ಉದ್ದೇಶವೇನು ?

ಶ್ರೀ ಬಿ.ಎಸ್. ಪಾಟೀಲ (ಸಾಸನೂರು) (ಕೃಷಿ ಕಾರುಕಟ್ಟೆ ಸಚಿವರು) :- ಮಾನ್ಯ ಅಧ್ಯಕ್ಷರೇ, ಸದಸ್ಯರು ಏನು ಕೇಳಿದ್ದರೋ ಅದೆಲ್ಲವನ್ನೂ ನಾನು ವಿವರವಾಗಿ ಹೇಳಿದ್ದೇನೆ. ಮತ್ತೆ ಅದನ್ನೇ ಅವರು ಕೇಳುತ್ತಾ ಹೋದರೆ ಮತ್ತೆ ಅದನ್ನೇ ನಾನು ಹೇಳಬೇಕಾಗುತ್ತದೆ.

ಶ್ರೀ ಕೆ. ಕೆಂಪೇಗೌಡ (ಪಾಂಡವಪುರ) :- ಮಾನ್ಯ ಅಧ್ಯಕ್ಷರೇ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ್ದು 1985ರಲ್ಲೇ ಸುಮಾರು 10 ಎಕರೆ ಜಮೀನನ್ನು ಸರ್ಕಾರ ಕೊಂಡುಕೊಂಡು ಕಾಂಪೌಂಡ್ ಕಟ್ಟಿಸಿ ಮಾರ್ಕೆಟ್‌ಯಾರ್ಡ ಕಟ್ಟಿಸಿದ್ದಾರೆ. ಆಡಳಿತ ಕಚೇರಿ ಕೂಡ ಅಲ್ಲಿ ನಿರ್ಮಾಣವಾಗಿದೆ. ಇಷ್ಟೆಲ್ಲ ಇನ್‌ವೆಸ್ಟ್‌ಮೆಂಟ್ ಮಾಡಿದರೂ ಸರ್ಕಾರಕ್ಕೆ ಒಂದು ನಯಾಪೈಸೆ ಕೂಡ ವಾಪಸ್ ಬಂದಿಲ್ಲ. ಪಾಂಡವಪುರ ತಿನಿಸ್ಸಿಗೆ ಉಪವಿಭಾಗದಲ್ಲಿ ಬೇಕಾದಷ್ಟು ಕಬ್ಬು, ಭತ್ತ, ರಾಗಿ, ಬೆಳೆಯುವ ಪ್ರದೇಶವಿದೆ. ಇದನ್ನು ಮಾಡಿಕೊಡಬೇಕೆಂದು ನಾನೇ ಬಹಳ ಒತ್ತಾಯ ಮಾಡಿದ್ದೇನೆ. 20-30 ಲಕ್ಷದಷ್ಟು ಅಲ್ಲಿ ಆಗಲೇ ಇನ್‌ವೆಸ್ಟ್ ಮಾಡಿ ಮಾರ್ಕೆಟ್‌ಯಾರ್ಡ್ ಮಾಡಿದ್ದಾರೆ, ರಸ್ತೆ, ನೀರಿನ ಸೌಲಭ್ಯವೂ ಆಗಿದೆ. 1985 ರಿಂದ ಇಷ್ಟು ಇನ್‌ವೆಸ್ಟ್ ಮಾಡಿದ್ದರೂ ಸರ್ಕಾರಕ್ಕೆ ನಯಾಪೈಸೆ ರಿಟರ್ನ್ಸ್ ಬಂದಿಲ್ಲ. ಈ ಕೆಲಸ ಮಾಡಿ ಎಂದು ನಾನು ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಪಾಟೀಲ (ಸಾಸನೂರು) :- ಮಾನ್ಯ ಸದಸ್ಯರು ಹೇಳಿದಂತೆ ಸರ್ಕಾರ ಯಾವ ಹಣವನ್ನೂ ಅಲ್ಲಿ ಇನ್‌ವೆಸ್ಟ್ ಮಾಡಿಲ್ಲ. ಎಪಿಎಂಸಿಯವರು ತಮ್ಮ ಉತ್ಪನ್ನಗಳಿಂದ ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಾರೆ. ಆ ರೀತಿಯಾಗಿ ಅಭಿವೃದ್ಧಿ ಕೆಲಸಗಳು ಅಲ್ಲಿ ಆಗಿವೆ. ನಾನು ಆಗಲೇ ಹೇಳಿದಂತೆ ಮೊದಲನೇ ಒಂದು ಕಮಿಟಿಯಲ್ಲಿ 19 ಲಕ್ಷ ರೂಪಾಯಿಗಳು ಇದ್ದುದು ಬೈಫರ್ಕೇಟ್ ಆದಮೇಲೆ ಈ ಕಮಿಟಿಗೆ 19 ಲಕ್ಷ ರೂ. ಬೈಫರ್ಕೇಟಾದ ಸಮಿತಿಗೆ 29 ಲಕ್ಷ ರೂ. ಮೊದಲಿನ ಮೂರು ಕಮಿಟಿ ಸೇರಿ ಇದ್ದುದ್ದಕ್ಕಿಂತ ಹೆಚ್ಚು ಉತ್ಪನ್ನ ತೆಗೆದುಕೊಂಡಿದ್ದೇವೆ. ಸರ್ಕಾರ ಹಣ ಖರ್ಚು ಮಾಡುವ ಪ್ರಶ್ನೆ ಬರುವುದಿಲ್ಲ. ಈ ಮಾರ್ಕೆಟಿಂಗ್ ಕಮಿಟಿಗಳು ಉತ್ಪನ್ನ ಹೆಚ್ಚು ಮಾಡಿ ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಮಾಡುತ್ತವೆ ಎಂದು ನಾನು ಆಗಲೇ ಹೇಳಿದ್ದೇನೆ, ಇದು ಅವರಿಗೆ ಏಕೆ ಅರ್ಥವಾಗುತ್ತಿಲ್ಲವೋ ನನಗಂತೂ ಗೊತ್ತಾಗುತ್ತಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ಇದು ಅರ್ಥವಾಗಬೇಕು ; ನಾನಲ್ಲ ಚುನಾವಣೆಯನ್ನು ಡಿಕ್ಲೇರ್ ಮಾಡಿದ್ದು, ಸಚಿವರು ಚುನಾವಣೆ ನಡೆಸಲು ನಿರ್ಧಾರ ಕೈಗೊಂಡು ಜಿಲ್ಲಾಧಿಕಾರಿಗಳಿಗೆ ಹಣವನ್ನು ಕಳುಹಿಸಿದ್ದು, ಕಾಂಗ್ರೆಸ್ ಸರ್ಕಾರದ ಅಧಿಕಾರಿಗಳು ಚುನಾವಣೆ ನಡೆಸಲು ಪತ್ರ ಬರೆದಿರುವದು. ಆ ನಿರ್ಧಾರ ಬದಲಾವಣೆಯಾಗಲು ತಾವೇ ಕಾರಣ. ನನ್ನ ತಾಲ್ಲೂಕಿನಲ್ಲಿ 10 ವರ್ಷಗಳಿಂದ ಮಾರ್ಕೆಟ್ ಯಾರ್ಡಿಲ್ಲ, ಇಲ್ಲಿಯವರೆಗೆ ಯಾವುದೇ ತರಹದ ಅಭಿವೃದ್ಧಿ ಕೆಲಸವಾಗಿಲ್ಲವೆಂಬುದನ್ನು ಅಂಕಿ ಅಂಶದ ಮೂಲಕ ನಿಮಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಆದರೂ ತಾವು ನಾಮಿನೇಷನ್ ಮಾಡುವ ಒಂದೇ ದುರುದ್ದೇಶ ಇಟ್ಟುಕೊಂಡು...

ಅಧ್ಯಕ್ಷರು :- ಮಾನ್ಯ ಸಚಿವರೇ ತಾವು ಏನಾದರೂ ಹೇಳುವಿರಾ ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) :- ಏನು ಹೇಳಬೇಕೋ ಅದನ್ನೆಲ್ಲಾ ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಎನ್. ಚಿಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೇ, ಇಂತಹ ಉತ್ತರ ನೀಡಿದರೆ ಸರ್ಕಾರಕ್ಕೆ ತಾವು ದಯಮಾಡಿ ನಿರ್ದೇಶನ ನೀಡಬೇಕಾಗುತ್ತದೆ.

ಅಧ್ಯಕ್ಷರು :- ಅದು ಮುಗಿದ ವಿಷಯ. ಮುಂದಿನದು ವಿತ್ತೀಯ ಕಾರ್ಯಕಲಾಪ.

8. ನಿಯಮ 69ರ ಮೇರೆಗೆ

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ನಗರಸಭೆ ಮತ್ತು ಪುರಸಭೆಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಬಗ್ಗೆ

ಶ್ರೀ ಜಗದೀಶ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಾವು ಕಳುಹಿಸಿದ್ದು ಬಹಳ ಆರ್ಜೆಂಟು ಮತ್ತು ಮಹತ್ವದ್ದು ಇದೆ. ನಾನು ನಿಲುವಳಿ ಸೂಚನೆ ಮೂಲಕ ತಂದಿದ್ದೆವು, ತಾವೇ ಅಜೆಂಡಾದಲ್ಲಿಟ್ಟಿದ್ದೀರಿ, 69ರ ಕೆಳಗೆ. ಅಜೆಂಡಾ ಪ್ರಕಾರ ತೆಗೆದುಕೊಳ್ಳಿ.

ಅಧ್ಯಕ್ಷರು :- ನಾನು ಅಜೆಂಡಾ ಚೇಂಜ್ ಮಾಡಬಹುದು.

ಶ್ರೀ ಜಗದೀಶ ಶೆಟ್ಟರ್ :- ತಮ್ಮ ಅಧಿಕಾರವ್ಯಾಪ್ತಿಯನ್ನು ನಾನು ಪ್ರಶ್ನಿಸುತ್ತಿಲ್ಲ. ಇವತ್ತು ನೀವು ಅಜೆಂಡಾದಲ್ಲಿಟ್ಟಿದ್ದೀರಿ, ಅದನ್ನು ಪ್ರಾರಂಭಿಸೋಣ.

MR. SPEAKER :- According to the rules, at 5 0'Clock, we will take it up.

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ನನಗೆ ಅರ್ಥವಾಗುತ್ತಿಲ್ಲ ಸರ್ಕಾರ ಏಕೆ ಇದಕ್ಕೆ, ಚರ್ಚೆ ಮಾಡಲು ಮೊನ್ನೆ ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದರು, ಇವತ್ಯಾಕೆ ಐದು ಗಂಟೆಗೆ ಮಾಡುವಂಥಾದು ? ರೂಲ್ಸ್ ಹೇಳುವುದು ? ಸಿಎಂಸಿದು, ಭ್ರಷ್ಟಾಚಾರದ ವಿಷಯ ತಂದರೆ ಸರ್ಕಾರಕ್ಕೆ ಚರ್ಚೆಗೆ ಮನಸಿಲ್ಲ ಅನ್ನಿಸುತ್ತದೆ ನನಗೆ. ಐದು ಗಂಟೆಗೆ ಚರ್ಚೆ ಮಾಡಿ ಯಾವಾಗ ಮುಗಿಸುವುದು ? ರೂಲ್ಸ್ ಹೇಳುವಿರಲ್ಲಾ, ಎಲ್ಲಾ ರೂಲ್ಸ್ ಪ್ರಕಾರವೇ ನಡೆಯುತ್ತಿದೆಯಾ ? ರೂಲ್ 69 ಕೆಳಗಿದ್ದವನ್ನೆಲ್ಲಾ ಸಂಜೆ 5 ಗಂಟೆ ಮೇಲೆ ಹಿಂದೆ ತೆಗೆದುಕೊಂಡಿದ್ದೀರೇನು ?

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :- ಮಾನ್ಯ ಅಧ್ಯಕ್ಷರೇ, ತಮ್ಮ ಆದೇಶಕ್ಕೆ ಖಂಡಿತವಾಗಿ ನಮ್ಮ ಗೌರವವಿದೆ. ಅದರಲ್ಲಿ ಎರಡು ಮಾತಿಲ್ಲ. ಆದರೇನಾಗಿದೆ ? ಇಷ್ಟರವರೆಗೆ ನಡೆದುಬಂದ ಸಂಪ್ರದಾಯ ತಾವೇನು ಅಜೆಂಡಾ ಕಳುಹಿಸಿಕೊಡುತ್ತೀರಿ ಅದರ ಪ್ರಕಾರವೇ ನಾವು ಹೋಗುತ್ತಿದ್ದೆವು. ನಮ್ಮ ಮಾತುಗಳನ್ನು ನೀವು ಕಂಟ್ರೋಲ್ ಮಾಡಲೇಬೇಕು, ಅದು ಅನಿವಾರ್ಯ ಇಲ್ಲದಿದ್ದರೆ ಸದನ ನಡೆಸಲು ಸಾಧ್ಯವಿಲ್ಲ. ನೀವು ಕಂಟ್ರೋಲ್ ಮಾಡುವುದನ್ನು ನಾವು ಖಂಡಿತ ಒಪ್ಪಿಕೊಳ್ಳುತ್ತೇವೆ. ಬಹಳ ಮುಖ್ಯವಾಗಿ ನಿಲುವಳಿ ಸೂಚನೆ ಏನಿದೆ ಇದನ್ನು ನಾವು ತಂದಿದ್ದೇವೆ ತಾವು ಹೇಳಿದಿರಿ ಅದನ್ನು ರೂಲ್ 69 ಕೆಳಗೆ ತೆಗೆದುಕೊಳ್ಳೋಣ ಎಂದು,